.ಈ ಆದೇಶದ ಮೇರೆಗ ಸದರಿ ಬೋಧಕ ಸಿಬ್ಬಂದಿಗಳು ಮಾನ್ಯ ಉಚ್ಛ ನ್ಯಾಯಾಲಯ, ಗುಲ್ಬರ್ಗಾ ಸರ್ಕ್ಯೂಟ್ ಬೆಂಚ್‌ನಲ್ಲಿ ರಿಟ್ ಪಿಟೀಷನ್ ಸಂ.83840–842/2012 ರಲ್ಲಿ ದಿನಾಂಕ : 08.01.2013ರಂದು ದಾಖಲು ಮಾಡಿದ್ದಾರೆ. ಮಾನ್ಯ ಉಚ್ಛ ನ್ಯಾಯಾಲಯವು ಸಂಸ್ಥೆಯ ಆದೇಶವನ್ನು ರದ್ದುಪಡಿಸಿ ಸದರಿಯವರುಗಳಿಗೆ ಶೋಕಾಸ್ ನೋಟೀಸ್ ನೀಡಿ ಅವರಿಂದ ವಿವರಣೆ ಪಡೆದು ತದನಂತರ ಸೂಕ್ತ ಆದೇಶವನ್ನು ನೀಡಬಹುದೆಂದು ಆದೇಶಿಸಿರುತ್ತದೆ.

ಕಾರಣ ಸದರಿ ವಿಷಯವನ್ನು ಆಡಳಿತ ಮಂಡಳಿಯ ಗಮನಕ್ಕೆ ತಂದು ಮುಂದಿನ ಸೂಕ್ತ ಮಾರ್ಗದರ್ಶನ ಕೋರಿ ಸಲ್ಲಿಸಿದೆ.

(ಡಾ.ತಿಪ್ಪೇರುದ್ರಪ್ಪ ಸಿ)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎಸ್.ಶಿವ ಶೈಲಂ) ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು
(ಎಸ್. ಶಿವಶೈಲಂ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು
ಡಾ. ಶರಣಪ್ರಕಾಶ್ ...
ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು
ಕರ್ನಾಟಕ ಸರ್ಕಾರ

ಸಭೆಯ ತೀರ್ಮಾನ :-

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಎಂಎಸ್ಸಿ ಪದವಿ ಹೊಂದಿರುವ ಸಿಬ್ಬಂದಿಗಳನ್ನು ಸಹಾಯಕ ಪ್ರಾಧ್ಯಾಪಕರ ಹುದ್ದೆಯಲ್ಲಿ ಈ ಹಿಂದೆ ನೇಮಕಾತಿ ಮಾಡಲಾಗಿದ್ದು, ಆದರೆ ಭಾರತೀಯ ವೈದ್ಯಕೀಯ ಪರಿಷತ್ತಿನ ನಿಯಮದನ್ವಯ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಎಂಎಸ್ಸಿ ಪದವಿಯೊಂದಿಗೆ ಪಿಹೆಚ್‌ಡಿ ಪದವಿಯನ್ನು ಸಹ ಹೊಂದಿರಬೇಕಾಗುತ್ತದೆ. ಆದರೆ ಈ ಮೂರು ಸಿಬ್ಬಂದಿಗಳು ಎಂಎಸ್ಸಿ ಪದವಿಯನ್ನು ಮಾತ್ರ ಹೊಂದಿದ ಕಾರಣ 3 ಬೋಧಕ ಸಿಬ್ಬಂದಿಗೆ ಉಚ್ಚ ನ್ಯಾಯಲಯವು ಗುಲ್ಬರ್ಗಾ ಪೀಠದ ಆದೇಶದಂತೆ ನೋಟಿಸ್ ಜಾರಿ ಮಾಡಿ ಹುದ್ದೆ ಬದಲಾವಣೆ ಹಾಗೂ ವೇತನ ನಿಗದಿಗೆ ಕ್ರಮ ಕೈಗೊಳ್ಳುವಂತೆ ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ಸೂಚಿಸಲಾಯಿತು. ಹಾಗೂ ಹುದ್ದೆ ಬದಲಾವಣೆ ನಂತರ ಸದರಿ ವೈದ್ಯರುಗಳಿಗೆ ಈ ಹಿಂದೆ ನೀಡಿದ ವೇತನವನ್ನು ಹಿಂಪಡೆಯದೆ ಇರಲು ಸೂಚಿಸಲಾಯಿತು. ಒಂದು ವೇಳೆ ಸದರಿ ವೈದ್ಯರುಗಳು ಟ್ಯೂಟರೆಂದು ಕಾರ್ಯನಿರ್ವಹಿಸಲು ಒಪ್ಪದಿದ್ದಲ್ಲಿ ಕೂಡಲೇ ಕರ್ತವ್ಯದಿಂದ ಬಿಡುಗಡೆಗೊಳಿಸುವಂತೆ ಆಡಳಿತ ಮಂಡಳಿಯು ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ನಿರ್ದೇಶನ ನೀಡಿತು.

| ವಿಷಯ ಸೂಚಿ ಸಂಖ್ಯೆ – 9 | ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳ ಗೈರು ಹಾಜರಾದ ಅವಧಿಯನ್ನು ಸಕ್ರಮಗೊಳಿಸುವ ಕುರಿತು. |
|---|---|

ರಿಮ್ಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ವಿವಿಧ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳು ದೀರ್ಘಾವದಿ ಗೈರು ಹಾಜರಾಗಿದ್ದು, ಸಂಸ್ಥೆಯ ಬೈಲಾ ನಿಯಮ (9)ರ ಕ್ರಮ ಸಂಖ್ಯೆ. 20ರನ್ವಯ ಸಂಸ್ಥೆಯ ನಿರ್ದೇಶಕರಿಗೆ ಗರಿಷ್ಟ 90 ದಿನಗಳ ರಜೆಯನ್ನು ಮಂಜೂರು ಮಾಡಲು ಅವಕಾಶ ಕಲ್ಪಿಸಿದ್ದು, 90 ದಿನಗಳು ಮೇಲ್ಪಟ್ಟಲ್ಲಿ ಕರ್ನಾಟಕ ನಾಗರಿಕ ಸೇವಾ ನಿಯಾಮವಳಿಗಳನ್ವಯ ಸರ್ಕಾರದ ಅನುಮೋದನೆ ಪಡೆದು ದೀರ್ಘಾವಧಿ ರಜೆಯನ್ನು ಮಂಜೂರು ಮಾಡಬೇಕಾಗಿರುತ್ತದೆ.

ಸದರಿ ಸಿಬ್ಬಂದಿಗಳು ಧೀರ್ಘಾವದಿ ಗೈರು ಹಾಜರಾಗಿದ್ದು, ಗೈರಯ ಹಾಜರಾದ ಅವಧಿಯ ವಿವರಗಳನ್ನು ಈ ಕೆಳಗೆ ನಮೂದಿಸಿದೆ. ಹಾಗೂ ಸದರಿ ಸಿಬ್ಬಂದಿಗಳು ಈ ಸಂಸ್ಥೆಯಲ್ಲಿ ಕರ್ತವ್ಯಕ್ಕೆ ಮರು ಹಾಜರಾಗಿದ್ದು, ಸಂಸ್ಥೆಯಲ್ಲಿ ಹಲವು ಹುದ್ದೆಗಳು ಖಾಲಿ ಇರುವುದರಿಂದ ರೋಗಿಗಳಿಗೆ ಚಿಕಿತ್ಸೆ ನೀಡಲು ತೊಂದರೆಯಾಗದಂತೆ, ರೋಗಿಗಳ ಹಿತದೃಷ್ಟಿಯಿಂದ ದೀರ್ಘಾವಧಿ ಗೈರು ಹಾಜರಾದ ಅವಧಿಯನ್ನು ಸರ್ಕಾರದ ಅನುಮೋದನೆ ಪಡೆದು ಸಕ್ರಮಗೊಳಿಸುವ ಷರತ್ತಿನ ಮೇರೆಗೆ ಕರ್ತವ್ಯಕ್ಕೆ ಮರು ಹಾಜರಾಗಲು ಅನುಮತಿ ನೀಡಲಾಗಿದೆ.

ಕಾರಣ ದೀರ್ಘಾವಧಿ ಗೈರು ಹಾಜರಾದ ದಿನಗಳ ರಜೆಯನ್ನು ವೇತನ ರಹಿತ ರಜೆಯನ್ನಾಗಿ ಸಕ್ರಮಗೊಳಿಸಿ ಕೈಗೊಂಡ ಕ್ರಮದ ಕುರಿತು ಆಡಳಿತ ಮಂಡಳಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

| ಕ್ರ.ಸಂ. | ಹೆಸರು | ಹುದ್ದೆ | ವಿಭಾಗ | ಗೈರು ಹಾಜರಾದ ವಿವರ | | ಅವಧಿ |
|---|---|---|---|---|---|---|
| | | | | ಇಂದ | ವರೆಗೆ | |
| 1 | ಡಾ. ರಮೇಶ | ಹಿರಿಯ ಸ್ಥಾನಿಕರು | ಶಸ್ತ್ರ ಚಿಕಿತ್ಸಾ ವಿಭಾಗ | 15.11.2010 | 24.07.2011 | 07 ತಿಂ. 09 ದಿನ |
| 2 | ಡಾ.ಗಂಗಾ ಎಸ್.ಪಾಟೀಲ್ | ಹಿರಿಯ ಸ್ಥಾನಿಕರು | ಸ್ತ್ರೀ ಮತ್ತು ಪ್ರಸೂತಿ ವಿಭಾಗ | 06.08.2012 | 14.03.2013 | 07 ತಿಂ. 10 ದಿನ |
| 3 | ಡಾ. ಅಮರಜೀತ್ ಪಾಟೀಲ್ | ತುರ್ತು ಚಿಕಿತ್ಸಾ ಘಟಕದ ವೈದ್ಯಾಧಿಕಾರಿಗಳು | ತುರ್ತು ಚಿಕಿತ್ಸಾ ಘಟಕ | 20.10.2012 | 01.09.2013 | 10 ತಿಂ. 10 ದಿನ |

(ಡಾ.ತಿಪ್ಪೇರುದ್ರಯ್ಯ. ಸಿ)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎಸ್.ಶಿವ ಶೈಲಂ) ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು
(ಎಸ್. ಶಿವಶೈಲಂ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು
ಡಾ. ಶರಣಪ್ರಕಾಶ ಆರ್. ಪಾಟೀಲ
ವೈದ್ಯಕೀಯ ಶಿಕ್ಷಣ ಸಚಿವರು
ಕರ್ನಾಟಕ ಸರ್ಕಾರ

| | | | | | | |
|---|---|---|---|---|---|---|
| 4 | ಶ್ರೀ ಅನೀಲ್ ಚವ್ಹಾಣ್ | ಶುಶ್ರೂಷಕರು | ರಿಮ್ಸ್ ಬೋಧಕ ಆಸ್ಪತ್ರೆ | 29.07.2010 | 02.12.2010 | 04 ತಿಂ. 04 ದಿನ |

ಸಭೆಯ ತೀರ್ಮಾನ :-

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳು ದೀರ್ಘಾವದಿ ರಜೆ ಮೇಲೆ ತೆರಳಿ, ಕರ್ತವ್ಯಕ್ಕೆ ಮರು ಹಾಜರಾಗಿರುವ ಬಗ್ಗೆ ಆಡಳಿತ ಮಂಡಳಿಯು ಪರಿಶೀಲಿಸಿ, ಸದರಿ ಸಿಬ್ಬಂದಿಗಳ ದೀರ್ಘಾವಧಿ ರಜೆಗಳನ್ನು ವೇತನ ರಹಿತ ರಜೆಗಳೆಂದು ಪರಿಗಣಿಸುವಂತೆ ಸೂಚಿಸಲಾಯಿತು. ಹಾಗೂ ಖಾಯಂ ಪೂರ್ವ ಸೇವಾ ಅವಧಿ ಘೋಷಣೆಯಾಗದ ಸಿಬ್ಬಂದಿಗಳಿಗೆ ಗೈರು ಹಾಜರಾದ ಅವದಿಯನ್ನು ವಿಸ್ತರಿಸಿ ನಿಯಮಾನುಸಾರ ಖಾಯಂ ಪೂರ್ವ ಸೇವಾ ಅವಧಿಯನ್ನಯ ಘೋಷಿಸಲು ಸೂಚಿಸಲಾಯಿತು. ಮುಂದಿನ ದಿನಗಳಲ್ಲಿ ಈ ರೀತಿಯ ಘಟನೆಗಳು ಮರುಕಳಿಸದಂತೆ ಕ್ರಮವಹಿಸಲು ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ಆಡಳಿತ ಮಂಡಳಿಯು ನಿರ್ದೇಶನ ನೀಡಿತು.

| | |
|---|---|
| ವಿಷಯ ಸೂಚಿ ಸಂಖ್ಯೆ. – 10 | ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳಿಗೆ ನಿಯಮಾನುಸಾರ ಪದೋನ್ನತಿ ಸಮಿತಿ ಸಭೆಯ ಅನುಮೋದನೆ ಮತ್ತು ಖಾಯಂ ಪೂರ್ವ ಸೇವಾವಧಿಯ್ನು ಘೋಷಿಸದೇ ಪದೋನ್ನತಿ ನೀಡಿರುವ ಕುರಿತು. |

ಭಾರತೀಯ ವೈದ್ಯಕೀಯ ಪರಿಷತ್ ಅವಶ್ಯಕತೆಗನುಗುಣವಾಗಿ ಈ ಕೆಳಕಂಡ ಬೋಧಕ ಸಿಬ್ಬಂದಿಗಳ ವಿದ್ಯಾರ್ಹತೆ ಹಾಗೂ ಸೇವಾನುಭವ ಪರಿಗಣಿಸಿ ಪದೋನ್ನತಿ ನೀಡಲಾಗಿರುತ್ತದೆ. ಮತ್ತು ಸದರಿ ವೈದ್ಯರುಗಳು ಪದೋನ್ನತಿ ನೀಡಿರುವ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಪದೋನ್ನತಿ ಹೊಂದಿ ಕಾರ್ಯನಿರ್ವಹಿಸುತ್ತಿರುವ ಹುದ್ದೆಗೆ ನಿಗದಿಪಡಿಸಿದ ವೇತನವನ್ನು ಸಂದಾಯ ಮಾಡಲಾಗಿರುತ್ತದೆ. ಆದರೆ ಸದರಿ ವೈದ್ಯರುಗಳಿಗೆ ಪದೋನ್ನತಿ ನೀಡುವ ಸಂದರ್ಭದಲ್ಲಿ ನಿಯಮಾನುಸಾರ ಪದೋನ್ನತಿ ಸಮಿತಿಯಲ್ಲಿ ಅನುಮೋದನೆಯನ್ನು ತೆಗೆದುಕೊಂಡಿರುವುದಿಲ್ಲ ಮತ್ತು ಖಾಯಂ ಪೂರ್ವ ಸೇವಾ ಅವಧಿ ಘೋಷಣೆ ಮಾಡಿರುವುದಿಲ್ಲ. ಆದರೆ ಎಂಸಿಐ ನಿಯಮಾವಳಿಯನ್ವಯ ಈ ಕೆಳಕಂಡ ವೈದ್ಯರುಗಳು ಪದೋನ್ನತಿಗೆ ಅರ್ಹರುತ್ತಾರೆ. ಕಾರಣ ಈ ಸಂಸ್ಥೆಗೆ ಹಾಜರಾದ ದಿನಾಂಕದಿಂದ 2 ವರ್ಷಗಳ ಖಾಯಂ ಪೂರ್ವ ಸೇವಾವಧಿಯನ್ನು ತೃಪ್ತಿಕರವಾಗಿ ಘೋಷಿಸಿದ ದಿನಾಂಕದಿಂದ ಅನ್ವಯವಾಗುವಂತೆ ಖಾಲಿ ಹುದ್ದೆಗಳನ್ನು ಪರಿಗಣಿಸಿ ಪದೋನ್ನತಿಯನ್ನು ಪರಿಗಣಿಸುವ ಕುರಿತು ಸದರಿ ವಿಷಯದಲ್ಲಿ ಆಡಳಿತ ಮಂಡಳಿಯ ಸೂಕ್ತ ಮಾರ್ಗದರ್ಶನಕ್ಕಾಗಿ ಸಲ್ಲಿಸಿದೆ.

(ಡಾ.ತಿಪ್ಪೇರುದ್ರಯ್ಯ. ಸಿ)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎನ್.ಶಿವ ಶೈಲಂ) ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು
(ಎನ್. ಶಿವಶೈಲಂ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು
ಡಾ. ಶರಣಪ್ರಕಾಶ ...
ವೈದ್ಯಕೀಯ ಶಿಕ್ಷಣ ರಾಜ್ಯ ಸಚಿ...
ಕರ್ನಾಟಕ ಸರ್ಕಾರ

| ಕ್ರ.ಸಂ. | ಹೆಸರು | ಪದನಾಮ | ವಿಭಾಗ | ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕ | ಪದೋನ್ನತಿ ಹೊಂದಿದ ದಿನಾಂಕ | ಷರಾ |
|---|---|---|---|---|---|---|
| 1 | ಡಾ. ಗಿರೀಷ ಅಚಲಕರ್ | ಸಹ ಪ್ರಾಧ್ಯಾಪಕರು | ರೋಗ ನಿರ್ಧಾರಕ ಶಾಸ್ತ್ರ ವಿಭಾಗ | 01.02.2006 (ಸಹಾಯಕ ಪ್ರಾಧ್ಯಾಪಕರಾಗಿ ವರದಿ ಮಾಡಿಕೊಂಡ ದಿನಾಂಕ) | 01.09.2007 | |

ಸಹಾಯಕ ಪ್ರಾಧ್ಯಾಪಕರಾಗಿ ದಿನಾಂಕ : 01.02.2006 ಕರ್ತವ್ಯಕ್ಕೆ ಹಾಜರಾಗಿರುತ್ತಾರೆ. ಎಂಸಿಐ ಪರಿವೀಕ್ಷಣೆಗಾಗಿ ದಿನಾಂಕ : 01.01.2008 ರಂದು ಸಹ ಪ್ರಾಧ್ಯಾಪಕರ ಹುದ್ದೆಗೆ ಪದೋನ್ನತಿಯನ್ನು ನೀಡಲಾಗಿರುತ್ತದೆ. ಅಂದೇ ಕರ್ತವ್ಯಕ್ಕೆ ಹಾಜರಾಗಿರುತ್ತಾರೆ. ಈ ಪದೋನ್ನತಿಯನ್ನು ಸಂಸ್ಥೆಯ 6ನೇ ಆಡಳಿತ ಮಂಡಳಿ ಸಭೆಯಲ್ಲಿ ಪದೋನ್ನತಿಯನ್ನು ಅಂಗೀಕರಿಸಲಾಗಿದೆ.
ಡಾ. ಗಿರೀಷ್ ಅಚಲಕರ್ ಇವರನ್ನು ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ನೇಮಿಸುವಾಗ ವಿಧಿಸಿದ ಎರಡು ವರ್ಷಗಳ ಖಾಯಂಪೂರ್ವ ಅವಧಿ ಷರತ್ತು ಪೂರ್ಣಗೊಳಿಸಿರುವುದಿಲ್ಲ ಮತ್ತು ನಿಗದಿತ ಇಲಾಖಾ ಪರೀಕ್ಷೆಯನ್ನು ದಿನಾಂಕ : 29.08.2009ಕ್ಕೆ ಪೂರ್ಣಗೊಳಿಸಿದ್ದು ದಿನಾಂಕ : 29.08.2009ರಂದು ಖಾಯಂಪೂರ್ವ ಸೇವಾ ಅವಧಿ ಘೋಷಿಸಲಾಗಿರುತ್ತದೆ. ಕಾರಣ ಖಾಯಂ ಪೂರ್ವ ಸೇವಾ ಅವಧಿ ಘೋಷಣೆಯಾಗಿರುವ ದಿನಾಂಕದಿಂದ ಸದರಿ ವೈದ್ಯರ ಪದೋನ್ನತಿಯನ್ನು ಅಂಗೀಕರಿಸುವ ಕುರಿತು ಮುಂದಿನ ಆದೇಶ ಕೋರಲಾಗಿದೆ.

| | ಹೆಸರು | ಪದನಾಮ | ವಿಭಾಗ | ಹಿರಿಯ ಸ್ಥಾನಿಕರು | ಸಹಾಯಕ ಪರಾಧ್ಯಾಪಕರು | |
|---|---|---|---|---|---|---|
| 2 | ಡಾ. ಶ್ರೀನಿವಾಸ ಅರೇರ್ | ಸಹಾಯಕ ಪ್ರಾಧ್ಯಾಪಕರು | ಮಕ್ಕಳ ಶಾಸ್ತ್ರ ವಿಭಾಗ | 25.06.2007 | 16.02.2010 | |

ಸದರಿ ವೈದ್ಯರು ದಿನಾಂಕ : 21.06.2007 ರಂದು ಸಂಚಿತ ವೇತನದಲ್ಲಿ ಮಕ್ಕಳ ಶಾಸ್ತ್ರ ವಿಭಾಗದ ಹಿರಿಯ ಸ್ಥಾನಿಕರ ಹುದ್ದೆಗೆ ನೇಮಕ ಮಾಡಲಾಗಿ, ದಿನಾಂಕ : 25.06.2007ರಂದು ಕರ್ತವ್ಯಕ್ಕೆ ಹಾಜರಾಗಿರುತ್ತಾರೆ.
ಎಂಸಿಐ ಪರಿವೀಕ್ಷಣೆ ನಿಮಿತ್ಯ ಮಕ್ಕಳ ಶಾಸ್ತ್ರ ವಿಭಾಗದಲ್ಲಿ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರ ಹುದ್ದೆ ಖಾಲಿ ಇರುವ ಪ್ರಯುಕ್ತ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಡಾ.ನಾಗರಾಜ ಜವಳಿ ಸಹಾಯಕ ಪ್ರಾಧ್ಯಾಪಕರು ಮಕ್ಕಳ ಶಾಸ್ತ್ರ ವಿಭಾಗ ಇವರನ್ನು ಸಹ ಪ್ರಾಧ್ಯಾಪಕರ ಹುದ್ದೆಗೆ ಬಡ್ತಿ ನೀಡಿ, ತೆರವಾದ ಖಾಯಂ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಡಾ. ಶ್ರೀನಿವಾಸ ಅರೇರ ಇವರ ಎಂ.ಡಿ. (ಮಕ್ಕಳ ಶಾಸ್ತ್ರ) ವಿದ್ಯಾರ್ಹತೆಯನ್ನು ಪರಿಗಣಿಸಿ ಬಡ್ತಿ ನೀಡಲಾಗಿದೆ. ಸದರಿಯವರು ನಿಗಧಿತ ಇಲಾಖಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ.
ಕಾರಣ ಸಂಸ್ಥೆಗೆ ಈ ಹುದ್ದೆ ಅವಶ್ಯವಿರುವುದರಿಂದ ಹಾಗೂ ಸದರಿಯವರು ಈಗಾಗಲೇ ಸಹಾಯಕ ಪ್ರಾಧ್ಯಾಪಕರ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ ಸದರಿಯವರ ಪದೋನ್ನತಿಗೆ ಅನುಮತಿ ನೀಡಲು ಕೋರಲಾಗಿದೆ.

(ಡಾ.ಶಿವಪ್ಪೇರುದ್ರಯ್ಯ, ಸಿ)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎನ್.ಶಿವ ಶೈಲಂ) ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು
(ಎನ್. ಶಿವಶೈಲಂ)
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು
ಡಾ. ಶರಣಪ್ರಕಾಶ ...
ವೈದ್ಯಕೀಯ ಶಿಕ್ಷಣ ...
ಕರ್ನಾಟಕ ಸರ್ಕಾರ

| 3 | ಹೆಸರು | ಪದನಾಮ | ವಿಭಾಗ | ಸಹಾಯಕ ಪ್ರಾಧ್ಯಾಪಕರಾಗಿ ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕ | ಸಹ ಪ್ರಾಧ್ಯಾಪಕರಾಗಿ ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕ | |
|---|---|---|---|---|---|---|
| | ಡಾ. ರಶ್ಮಿಕುಮಾರಿ ಟಿ.ಆರ್ | ಸಹ ಪ್ರಾಧ್ಯಾಪಕರು | ರೋಗ ನಿರ್ಧಾರಕ ಶಾಸ್ತ್ರ ವಿಭಾಗ | 01.03.2007 | 01.03.2011 | |

ಡಾ. ರಶ್ಮಿಕುಮಾರಿ ಟಿ.ಆರ್, ರೋಗ ನಿರ್ಧಾರಕ ಶಾಸ್ತ್ರ ವಿಭಾಗ ಇವರು ಸಹಾಯಕ ಪ್ರಾಧ್ಯಾಪಕರ ಹುದ್ದೆಯಲ್ಲಿ ದಿನಾಂಕ : 01.03.2007 ರಂದು ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ. ದಿನಾಂಕ : 01.03.2007ರಂದು ಸಹಾಯಕ ಪ್ರಾಧ್ಯಾಪಕರ ಹುದ್ದೆಯಲ್ಲಿ ವರದಿ ಮಾಡಿಕೊಂಡಿರುತ್ತಾರೆ.

ದಿನಾಂಕ : 13.05.2011ರ ಪದೋನ್ನತಿ ಸಮಿತಿ ಸಭೆಯಲ್ಲಿ ಡಾ.ರಶ್ಮಿಕುಮಾರಿ ಇವರಿಗೆ ಸಹ ಪ್ರಾಧ್ಯಾಪಕರ ಹುದ್ದೆಗೆ ದಿನಾಂಕ : 01.03.2011ರಿಂದ ಪೂರ್ವಾನ್ವಯವಾಗುವಂತೆ ಸಮಿತಿ ತೀರ್ಮಾನಿಸಿದ್ದು, ದಿನಾಂಕ : 13.02.2012ರಂದು ಆದೇಶವನ್ನು ನೀಡಲಾಗಿದೆ. ಇಲಾಖಾ ಪದೋನ್ನತಿ ಸಮಿತಿ ಸಭೆಯಲ್ಲಿ ಸರ್ಕಾರದ ಯಾವ ಪ್ರತಿನಿಧಿಯು ಹಾಜರಿರದೆ ಸಂಸ್ಥೆಯ ಸಿಬ್ಬಂದಿಗಳೇ ಪದೋನ್ನತಿ ಸಮಿತಿ ಸದಸ್ಯರಾಗಿದ್ದು, ಇಲಾಖಾ ಪದೋನ್ನತಿ ಸಮಿತಿ ಸಭೆಯ ನಡಾವಳಿಯನ್ನು ಅಂಗೀಕರಿಸಬೇಕು. ಆದರೆ ಭಾರತೀಯ ವೈದ್ಯಕೀಯ ಪರಿಷತ್ ನಿಯಮಾವಳಿಯನ್ವಯ 04 ವರ್ಷಗಳ ಸಹಾಯಕ ಪ್ರಾಧ್ಯಾಪಕರ ಹುದ್ದೆಯ ಸೇವಾನುಭವ ಮತ್ತು 02 ಪಬ್ಲಿಕೇಷನ್‌ಗಳನ್ನು ಪ್ರಕಟಿಸಿರಬೇಕಾಗಿರುತ್ತದೆ. ಆದರೆ ಸದರಿ ವೈದ್ಯರು ಇಲಾಖಾ ಪದೋನ್ನತಿ ಸಮಿತಿ ಸಭೆಯ ದಿನಾಂಕದಂದು ಕೇವಲ 04 ವರ್ಷಗಳ ಸೇವಾನುಭವದೊಂದಿಗೆ ಒಂದು ಪಬ್ಲಿಕೇಷನ್ ಮಾತ್ರ ಪ್ರಕಟಿಸಿರುತ್ತಾರೆ. ಈ ಸಂಸ್ಥೆಯಲ್ಲಿ ರೋಗಲಕ್ಷಣ ಶಾಸ್ತ್ರ ವಿಭಾಗದ ಸ್ನಾತಕೋತ್ತರ ಪರವಾನಿಗೆಗಾಗಿ ದಿನಾಂಕ : 17.01.2014ರಂದು ಜರುಗಿದ ಎಂಸಿಐ ಪರಿವೀಕ್ಷಣೆಯಲ್ಲಿ ಸದರಿಯವರ ಪದೋನ್ನತಿಯನ್ನು ಪರಿಗಣಿಸಿರುವುದಿಲ್ಲ (ಎಂಸಿಐ ಪ್ರತಿ ಲಗತ್ತಿಸಿದೆ).

| | | | | | | |
|---|---|---|---|---|---|---|
| 4 | ಡಾ. ಸುಭಾಷ | ಸಹಾಯಕ ಪ್ರಾಧ್ಯಾಪಕರು | ಎಲುಬು ಮತ್ತು ಕೀಲು ವಿಭಾಗ | 09.04.2010 | | |

ಡಾ. ಸುಬಾಷ , ಇವರು ಎಲುಬು ಮತ್ತು ಕೀಲು ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ದಿನಾಂಕ : 09.04.2010 ರಂದು ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ. ಆದರೆ ಸದರಿ ವೈದ್ಯರ ನೇಮಕಾತಿಯು ಆಡಳಿತ ಮಂಡಳಿಯ ಅನುಮೋದನೆಯನ್ನು ಪಡೆಯದೆ ದಿನಾಂಕ : 23.06.2013 ರಂದು ಜರುಗಿದ 17ನೇ ಆಡಳಿತ ಮಂಡಳಿ ಸಭೆಯಲ್ಲಿ ಸದರಿಯವರ ಖಾಯಂ ಪೂರ್ವ ಸೇವಾ ಅವಧಿ ಘೋಷಿಸಲಾಗಿರುತ್ತದೆ. ಕಾರಣ ಸದರಿಯವರ ನೇಮಕಾತಿ ಹಾಗೂ ಖಾಯಂಪೂರ್ವ ಸೇವಾವಧಿ ತೃಪ್ತಿಕರವಾಗಿ ಘೋಷಿಸಿರುವ ಕುರಿತು ಘಟನೋತ್ತರ ಮಂಜೂರಾತಿ ಕೋರಿದೆ.

ಸಭೆಯ ತೀರ್ಮಾನ :-

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಕೆಳಕಂಡ ಬೋಧಕ ಸಿಬ್ಬಂದಿಗಳಿಗೆ ನಿಯಮಾನುಸಾರ ಪದೋನ್ನತಿ ಸಮಿತಿ ಸಭೆಯ ಅನುಮೋದನೆ ಮತ್ತು ಖಾಯಂ ಪೂರ್ವ ಸೇವಾ ಅವಧಿಯನ್ನು ಘೋಷಿಸದೆ ಪದೋನ್ನತಿ ನೀಡಿರುವ ಕುರಿತು ಈ ಕೆಳಕಂಡ ಅಂಶಗಳೊಂದಿಗೆ ಮುಂದಿನ ಕ್ರಮ ಕೈಗೊಳ್ಳಲು ಆಡಳಿತ ಮಂಡಳಿಯು ಅನುಮೋದನೆ ನೀಡಿತು.

1) ಡಾ. ಗಿರೀಷ್ ಅಚಲಕರ್, ರೋಗನಿರ್ಧಾರಕ ಶಾಸ್ತ್ರ ವಿಭಾಗ ಇವರ ಸಹ ಪ್ರಾಧ್ಯಾಪಕ ಹುದ್ದೆಯ ಪದೋನ್ನತಿಯನ್ನು ಖಾಯಂ ಪೂರ್ವ ಸೇವಾವಧಿ ಘೋಷಣೆ ಮಾಡಿ, ಸಹ ಪ್ರಾಧ್ಯಾಪಕರ ಹುದ್ದೆಗೆ ಬಡ್ತಿ ಹೊಂದಲು ಅರ್ಹರಾದ ದಿನಾಂಕದಿಂದ ಪದೋನ್ನತಿಗೆ ಪರಿಗಣಿಸುವಂತೆ ಸೂಚನೆ ನೀಡಲಾಯಿತು.

(ಡಾ.ತಿಪ್ಪೇರುದ್ರಯ್ಯ. ಸಿ)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎನ್.ಶಿವ ಶೈಲಂ) ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು
(ಎನ್. ಶಿವಶೈಲಂ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು
ಡಾ. ಶರಣಪ್ರಕಾಶ್
ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು
ಕರ್ನಾಟಕ ಸರ್ಕಾರ

2) ಡಾ. ಶ್ರೀನಿವಾಸ ಅರೇರ್ ಇವರಿಗೆ ಎಂಸಿಐ ಪರೀವೀಕ್ಷಣೆಯ ಸಂದರ್ಭದಲ್ಲಿ ನಿಗಧಿತ ವಿದ್ಯಾರ್ಹತೆ ಹೊಂದಿರುವುದರಿಂದ ಸದರಿ ವೈದ್ಯರನ್ನು ಮಕ್ಕಳ ಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಪರಿಗಣಿಸಲು ಮತ್ತು ನಿಗದಿತ ಇಲಾಖೆ ಪರೀಕ್ಷೆ ಪೂರ್ಣಗೊಂಡ ದಿನಾಂಕಕ್ಕೆ ಖಾಯಂಪೂರ್ವ ಸೇವಾ ಅವಧಿ ಘೋಷಿಸಲು ಸಭೆಯು ಸೂಚಿಸಿತು.

3) ಡಾ. ರಷ್ಮಿಕುಮಾರಿ ಟಿ.ಆರ್., ಸಹ ಪ್ರಾಧ್ಯಾಪಕರು, ರೋಗ ನಿರ್ಧಾರಕ ಶಾಸ್ತ್ರ ವಿಭಾಗ ಇವರನ್ನು ಎಂಸಿಐ ನಿಯಮಾವಳಿಯನ್ವಯ ಪದೋನ್ನತಿಗೆ ಅರ್ಹದಿಲ್ಲದಿದ್ದರೂ ಪದೋನ್ನತಿ ನೀಡಲಾಗಿದ್ದು, ಅದನ್ನು ರದ್ದು ಪಡಿಸಿ, ಅರ್ಹರಾದ ದಿನಾಂಕದಿಂದ ಪದೋನ್ನತಿ ನೀಡುವ ಬಗ್ಗೆ, ಸದರಿ ವೈದ್ಯರಿಗೆ ನೋಟೀಸ್ ಜಾರಿ ಮಾಡಲು ಸಭೆಯು ತೀರ್ಮಾನಿಸಿತು.

4) ಡಾ. ಸುಭಾಷ, ಇವರು ಎಂಸಿಐ ನಿಯಮಾವಳಿಯನ್ವಯ ನಿಗಧಿತ ವಿದ್ಯಾರ್ಹತೆಯನ್ನು ಹೊಂದಿರುವುದರಿಂದ ಎಲುಬು ಮತ್ತು ಕೀಲು ವಿಭಾಗದ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಪರಿಗಣಿಸಲು ಮತ್ತು ಸದರಿಯವರ ಖಾಯಂ ಪೂರ್ವ ಸೇವಾ ಅವಧಿಯನ್ನು ಘೋಷಿಸಿರುವುದನ್ನು ಸಭೆಯು ಅಂಗೀಕರಿಸಿತು .

| | |
|---|---|
| ವಿಷಯ ಸೂಚಿ ಸಂಖ್ಯೆ. – 11 | ಹಳೆಯ ರಿಮ್ಸ್ ಬೋಧಕ ಆಸ್ಪತ್ರೆಯ ಜಾಗದಲ್ಲಿ 15 ಎಕರೆ ಜಾಗವನ್ನು ಮಾನ್ಯ ಉಚ್ಚ ನ್ಯಾಯಲಯಕ್ಕೆ ಹಸ್ತಾಂತರಿಸುವ ಬಗ್ಗೆ. |

ನಿಬಂಧಕರು, ಕರ್ನಾಟಕ ಉಚ್ಚ ನ್ಯಾಯಲಯ, ಬೆಂಗಳೂರು ಇವರು ದಿನಾಂಕ 18.12.2012ರ ಪತ್ರದಲ್ಲಿ ಹಳೆಯ ಜಿಲ್ಲಾ ಆಸ್ಪತ್ರೆ (ರಿಮ್ಸ್ ಬೋಧಕ ಆಸ್ಪತ್ರೆ) ಯ ಒಟ್ಟು 32 ಎಕರೆ ಜಾಗದಲ್ಲಿ ಜಿಲ್ಲಾ ನ್ಯಾಯಲಯದ ಸಂಕೀರ್ಣ, ಅಧಿಕಾರಿಗಳ ವಸತಿ ಗೃಹ ಮತ್ತು ಇತರ ನ್ಯಾಯಲಯದ ಕಟ್ಟಡಗಳನ್ನು ನಿರ್ಮಿಸಲು ಮಾನ್ಯ ಉಚ್ಚ ನ್ಯಾಯಲಯಕ್ಕೆ 15 ಎಕರೆ ಜಾಗವನ್ನು ಹಸ್ತಾಂತರಿಸಲು ಕೋರಿರುತ್ತಾರೆ.

ದಿನಾಂಕ 16.08.2013ರ ಪತ್ರದಲ್ಲಿ ವೈದ್ಯಕೀಯ ಶಿಕ್ಷಣ ನಿರ್ದೇಶಕರು, ಬೆಂಗಳೂರು ಇವರು ಹಳೆಯ ಜಿಲ್ಲಾ ಆಸ್ಪತ್ರೆಯ ಜಾಗವನ್ನು ಮಾನ್ಯ ಉಚ್ಚ ನ್ಯಾಯಲಯಕ್ಕೆ ವರ್ಗಾಯಿಸುವ ಕುರಿತು ಆಡಳಿತ ಮಂಡಳಿ ಸಭೆಯಲ್ಲಿ ಚರ್ಚಿಸಿ ನಿರ್ಧಾರವನ್ನು ಕೈಗೊಂಡು ನಿರ್ದೇಶನಾಲಯಕ್ಕೆ ಮಾಹಿತಿಯನ್ನು ನೀಡಲು ಕೋರಿರುತ್ತಾರೆ.

ಹಳೆಯ ರಿಮ್ಸ್ ಬೋಧಕ ಆಸ್ಪತ್ರೆಯ ಜಾಗದಲ್ಲಿ ಸದ್ಯ ಜಿಲ್ಲಾ ಔಷಧ ಉಗ್ರಾಣ, ಎ.ಎನ್.ಎಂ ತರಬೇತಿ ಕೇಂದ್ರ, ಆಯುಷ್ ವಿಭಾಗ ಮತ್ತು ಬೋಧಕೇತರ ಸಿಬ್ಬಂದಿಗಳ ವಸತಿ ಗೃಹಗಳಿರುತ್ತವೆ. ಮುಂಬರುವ ವರ್ಷಗಳಲ್ಲಿ 100 ವೈದ್ಯ ವಿದ್ಯಾರ್ಥಿಗಳ ಪ್ರವೇಶವನ್ನು 150 ಕ್ಕೆ ಹೆಚ್ಚಿಸಲು ಚಿಂತಿಸಲಾಗಿದ್ದು, ಪ್ರಸ್ತುತ ನೂತನ ಬೋಧಕ ಆಸ್ಪತ್ರೆಯ ಸಾಮಾರ್ಥ್ಯ 520 ಹಾಸಿಗೆಗಳಿರುವುದರಿಂದ ಭಾರತೀಯ ವೈದ್ಯಕೀಯ ಮಂಡಳಿಯ ನಿಯಮದಂತೆ 100 ರಿಂದ 150ಕ್ಕೆ ವೈದ್ಯ ವಿದ್ಯಾರ್ಥಿಗಳ ಪ್ರವೇಶವನ್ನು ಹೆಚ್ಚಿಸಲು 860 ಸಾಮಾರ್ಥ್ಯದ ಹಾಸಿಗೆಯ ಆಸ್ಪತ್ರೆಯು ಅವಶ್ಯವಿರುತ್ತದೆ. ಹಾಗೂ ಮುಂದಿನ ದಿನಗಳಲ್ಲಿ ಹಳೆಯ ಬೋಧಕ ಆಸ್ಪತ್ರೆಯ ಜಾಗವನ್ನು ವಿವಿಧ ಉದ್ದೇಶಗಳಿಗಾಗಿ ಬಳಸಿಕೊಳ್ಳಲು ಯೋಜನೆಯನ್ನು ರೂಪಿಸಲಾಗುತ್ತಿದೆ.

(ಡಾ.ತಿಪ್ಪೇರುದ್ರಯ್ಯ. ಸಿ)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎನ್.ಶಿವ ಶೈಲಂ) ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು
(ಎನ್. ಶಿವಶೈಲಂ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

ಕಾರಣ ವೈದ್ಯ ವಿದ್ಯಾರ್ಥಿಗಳ ಪ್ರವೇಶವನ್ನು ಹೆಚ್ಚಿಸಲು ಮತ್ತು ವಿವಿಧ ಯೋಜನೆಗಳಿಗೆ ಜಾರಿಗೂ ಮತ್ತು ಕಟ್ಟಡಗಳ ನಿರ್ಮಾಣಕ್ಕೆ ಹಳೆಯ ಬೋಧಕ ಹಳೆಯ ಆಸ್ಪತ್ರೆಯ ಜಾಗವು ಸಂಸ್ಥೆಗೆ ಅತ್ಯಾವಶ್ಯಕವಾಗಿ ಬೇಕಾಗಿರುತ್ತದೆ. ಮಾನ್ಯ ಉಚ್ಚ ನ್ಯಾಯಲಯವ ಕೋರಿರುವಂತೆ 15 ಎಕರೆ ಜಾಗವನ್ನು ಹಸ್ತಾಂತರಿಸುವ ಕುರಿತು ಈ ಪ್ರಸ್ತಾವನೆಯನ್ನು ಆಡಳಿತ ಮಂಡಳಿಯ ಗಮನಕ್ಕೆ ತಂದು ಸೂಕ್ತ ಮಾರ್ಗದರ್ಶನ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :–

ಹಳೆಯ ಜಿಲ್ಲಾ ಆಸ್ಪತ್ರೆ (ರಿಮ್ಸ್ ಬೋಧಕ ಆಸ್ಪತ್ರೆ) ಯ ಒಟ್ಟು 32 ಎಕರೆ ಜಾಗದಲ್ಲಿ ಜಿಲ್ಲಾ ನ್ಯಾಯಲಯದ ಸಂಕೀರ್ಣ, ಅಧಿಕಾರಿಗಳ ವಸತಿ ಗೃಹ ಮತ್ತು ಇತರ ನ್ಯಾಯಲಯದ ಕಟ್ಟಡಗಳನ್ನು ನಿರ್ಮಿಸಲು ಅವಶ್ಯವಿರುವ 15 ಎಕರೆ ಜಾಗವನ್ನು ಮಾನ್ಯ ಉಚ್ಚ ನ್ಯಾಯಲಯಕ್ಕೆ ಹಸ್ತಾಂತರಿಸುವ ಬಗ್ಗೆ, ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆಯನ್ನು ಜರುಗಿಸಿ, ಸಭೆಯ ನಿರ್ಣಯದಂತೆ ಇಲಾಖಾವಾರು ಬೇಡಿಕೆಯೊಂದಿಗೆ ನೀಲಿ ನಕ್ಷೆಗಳನ್ನು ಸಿದ್ದಪಡಿಸಿ, ಸರ್ಕಾರಕ್ಕೆ ಸಲ್ಲಿಸುವಂತೆ ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ಸೂಚಿಸಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ. – 12 | ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರಿಗೆ ಬಿ.ಎಸ್ಸಿ ನರ್ಸಿಂಗ್ ಕೋರ್ಸ್‌ನ್ನು ಹೊಸದಾಗಿ ಸ್ಥಾಪಿಸಲು ಅವಶ್ಯವಿರುವ ಮೂಲಭೂತ ಸೌಕರ್ಯಗಳನ್ನು ಪೂರೈಸಲು ಮತ್ತು ಅವಶ್ಯವಿರುವ ಹುದ್ದೆಗಳನ್ನು ಸೃಜಿಸಲು ಅನುಮತಿ ನೀಡುವ ಕುರಿತು. |

ಸರ್ಕಾರದ ಪತ್ರ ಸಂಖ್ಯೆ. ಆಕುಕ / 161 / ಕೆವಿಎಂ /2011 ದಿನಾಂಕ 10.12.2012ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರಿಗೆ 2013–14ನೇ ಸಾಲಿನಿಂದ ಬಿ.ಎಸ್ಸಿ., ನರ್ಸಿಂಗ್ ಕೋರ್ಸ್‌ನ್ನು 60 (ಅರವತ್ತು) ಸೀಟುಗಳ ವಾರ್ಷಿಕ ಪ್ರವೇಶ ಮಿತಿಯೊಂದಿಗೆ ಹೊಸದಾಗಿ ಪ್ರಾರಂಭಿಸಲು ಅನುಮತಿಯನ್ನು ನೀಡಲಾಗಿದೆ.

ಬಿ.ಎಸ್ಸಿ., ನರ್ಸಿಂಗ್ ಕೋರ್ಸ್‌ನ್ನು ಪ್ರಾರಂಭಿಸಲು ನರ್ಸಿಂಗ್ ಕಾಲೇಜಿಗೆ ಪ್ರತ್ಯೇಕವಾದ ಕಾಲೇಜು ಕಟ್ಟಡ, ತರಗತಿಗಳು, ವಿಭಾಗಗಳು, ಪ್ರಯೋಗಾಲಯಗಳು, ಪ್ರೇಕ್ಷಾಗಾರ, ಗ್ರಂಥಾಲಯ, ಪ್ರತ್ಯೇಕ ಆಡಳಿತ ವಿಭಾಗ, ಕಾಮನ್ ರೂಮ್ಸ್, ಅಭಿಲೇಖಾಲಯ, ಉಗ್ರಾಣ, ಆಡಿಯೋ ವಿಜುಯಲ್ಸ್, 60 ಆಸನಗಳು ವಾಹನ, ಅಗ್ನಿಶಾಮಕ ಸಾಧನಗಳು, ಆಟದ ಮೈದಾನ, ಪ್ರತ್ಯೇಕ ವಿದ್ಯಾರ್ಥಿ, ವಿದ್ಯಾರ್ಥಿನಿಯರ ವಸತಿ ಗೃಹಗಳು, ಮೂಲಭೂತ ಸೌಲಭ್ಯಗಳು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯನ್ನು ಭಾರತೀಯ ನರ್ಸಿಂಗ್ ಕೌನ್ಸಿಲ್ ನಿಯಮದನ್ವಯ ಹೊಂದಿರಬೇಕಾಗಿರುತ್ತದೆ.

ಕರ್ನಾಟಕ ನರ್ಸಿಂಗ್ ಕೌನ್ಸಿಲ್ ಅನ್ವಯ ಮೂಲಭೂತ ಸೌಕರ್ಯಗಳನ್ನು ಮತ್ತು ಸೃಜಿಸಬೇಕಾದ ಹುದ್ದೆಗಳನ್ನು ಈ ಕೆಳಗೆ ವಿವರವಾಗಿ ನಮೂದಿಸಿದೆ.

(ಡಾ.ತಿಪ್ಪೇರುದ್ರಯ್ಯ. ಸಿ)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎನ್.ಶಿವ ಶೈಲಂ) ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

(ಎನ್. ಶಿವಶೈಲಂ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಡಾ. ಶರಣಪ್ರಕಾಶ್ ರುದ್ರಪ್ಪ ಪಾಟೀಲ
ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು
ಕರ್ನಾಟಕ ಸರ್ಕಾರ

ಹೊಸದಾಗಿ ಸೃಜಿಸಬೇಕಾದ ಹುದ್ದೆಗಳ ವಿವರ

1) ಬೋಧಕ ಸಿಬ್ಬಂದಿ ಹುದ್ದೆಗಳ ವಿವರ

| ಕ್ರಮ ಸಂಖ್ಯೆ. | ಸೃಜಿಸಬೇಕಾದ ಹುದ್ದೆಯ ವಿವರ | ಸೃಜಿಸಬೇಕಾದ ಹುದ್ದೆಗಳ ಸಂಖ್ಯೆ. | ಹುದ್ದೆಯ ವೇತನ ಶ್ರೇಣಿ |
|---|---|---|---|
| 1 | ಪ್ರಾಧ್ಯಾಪಕರು ಕಂ ಪ್ರಾಂಶುಪಾಲರು | 01 | ರೂ. 36,300 ರಿಂದ 53,850/- |
| 2 | ಪ್ರಾಧ್ಯಾಪಕರು ಕಂ ಉಪ ಪ್ರಾಂಶುಪಾಲರು | 01 | ರೂ. 30,400 ರಿಂದ 51,300/- |
| 3 | ರೀಡರ್ / ಸಹ ಪ್ರಾಧ್ಯಾಪಕರು | 01 | ರೂ. 26,000 ರಿಂದ 47,700/- |
| 4 | ಉಪನ್ಯಾಸಕರು | 04 | ರೂ. 22,800 ರಿಂದ 43,200/- |
| 5 | ಟ್ಯೂಟರ್ಸ್ / ಕ್ಲಿನಿಕಲ್ ಇನ್ಸ್‌ಸ್ಟ್ರಕ್ಟರ್ | 35 | ರೂ. 28,100 ರಿಂದ 50,100/- |
| | ಒಟ್ಟು ಬೋಧಕ ಹುದ್ದೆಗಳು | 42 | |

2) **Ministerial Staff** (ಆಡಳಿತ ಸಿಬ್ಬಂದಿ)

| ಕ್ರಮ ಸಂಖ್ಯೆ. | ಸೃಜಿಸಬೇಕಾದ ಹುದ್ದೆಯ ವಿವರ | ಸೃಜಿಸಬೇಕಾದ ಹುದ್ದೆಗಳ ಸಂಖ್ಯೆ. | ಹುದ್ದೆಯ ವೇತನ ಶ್ರೇಣಿ |
|---|---|---|---|
| | ಆಡಳಿತ ಸಿಬ್ಬಂದಿ | | |
| 1 | ಸಹಾಯಕ ಆಡಳಿತಾದಿಕಾರಿಗಳು | 01 | ರೂ. 24,000 ರಿಂದ 45,300/- |
| 2 | ಕಛೇರಿ ಅಧಿಕ್ಷಕರು | 01 | ರೂ. 20,000 ರಿಂದ 36,300/- |
| 3 | ಪ್ರಾಂಶುಪಾಲರ ಅಪ್ತ ಸಹಾಯಕರು | 01 | ರೂ. 14,550 ರಿಂದ 26,700/- |
| 4 | ಖಜಾಂಚಿ / ಲೆಕ್ಕಪತ್ರ | 01 | ರೂ. 14,550 ರಿಂದ 26,700/- |
| 5 | ಪ್ರಥಮ ದರ್ಜೆ ಸಹಾಯಕರು | 02 | ರೂ. 14,550 ರಿಂದ 26,700/- |
| 6 | ದ್ವಿತಿಯಾ ದರ್ಜೆ ಸಹಾಯಕರು | 02 | ರೂ. 11,600 ರಿಂದ 21,000/- |
| 7 | ಸ್ಟೋರ್ ಕೀಪರ್ | 01 | ರೂ. 11,600 ರಿಂದ 21,000/- |
| | ಒಟ್ಟು | 09 | |
| | ಸ್ಟೋರ್ ಕೀಪರ್ | | |
| 8 | ಉಗ್ರಾಣ ನಿರ್ವಹಣೆ | 01 | ರೂ. 11,600 ರಿಂದ 21,000/- |
| 9 | ಕ್ಲಾಸ್ ರೂಮ್ ಅಟೆಂಡೆಟ್ | 02 | ರೂ. 11,600 ರಿಂದ 21,000/- |
| 10 | ಸ್ವಚ್ಚತಾ ಸಿಬ್ಬಂದಿ | 05 | ರೂ. 9,600 ರಿಂದ 14,550/- |
| | ಭದ್ರತಾ ಸಿಬ್ಬಂದಿ | 05 | ರೂ. 9,600 ರಿಂದ 14,550/- |
| | ಒಟ್ಟು | 13 | |

(ಡಾ.ತಿಪ್ಪೇರುದ್ರಯ್ಯ. ಸಿ)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎಸ್.ಶಿವ ಶೈಲಂ) ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಎಸ್. ಶಿವಶೈಲಂ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

| | | | |
|---|---|---|---|
| ಅಫೀಸ್ ಅಟೆಂಡರ್ಸ್ | | | |
| | ಅಫೀಸ್ ಅಟೆಂಡರ್ | 04 | ರೂ. 9,600 ರಿಂದ 14,550/- |
| ಲೈಬ್ರರಿ | | | |
| | ಗ್ರಂಥಪಾಲಕರು | 02 | ರೂ. 14,550 ರಿಂದ 26,700/- |
| | ಗ್ರಂಥಾಲಯದ ಅಟೆಂಡರ್ | 01 | ರೂ. 9,600 ರಿಂದ 14,550/- |
| | ಒಟ್ಟು | 03 | |
| ಹಾಸ್ಟೇಲ್ | | | |
| | ವಾರ್ಡನ್ | 02 | ರೂ. 11,000 ರಿಂದ 19,000/- |
| | ಕುಕ್ಸ್, ಬಿಯರರ್ಸ್ | 02 | ರೂ. 11,000 ರಿಂದ 19,000/- |
| | ಆಯಾ / ಅಟೆಂಡರ್ಸ್ | 02 | ರೂ. 9,600 ರಿಂದ 14,550/- |
| | ಭದ್ರತಾ ಸಿಬ್ಬಂದಿ | 02 | ರೂ. 9,600 ರಿಂದ 14,550/- |
| | ಗಾರ್ಡನರ್ಸ್-2/ ದೋಬಿ-1 | 03 | ರೂ. 9,600 ರಿಂದ 14,550/- |
| | ಒಟ್ಟು | 11 | |

ಬಿಎಸ್ಸಿ ನರ್ಸಿಂಗ್ **Teaching Block** ಕಟ್ಟಡಕ್ಕೆ 23720 **sqr.ft** ಮತ್ತು **Hostel Block** ಕಟ್ಟಡಕ್ಕೆ 30750 **sqr.ft** ಒಟ್ಟು 54470 **sqr.ft** ಗಳ ಅವಶ್ಯಕತೆಯಿದ್ದು, ಪ್ರತಿ ಚದುರ ಅಡಿಗೆ ರೂ. 2000/- ದಂತೆ 54470 X 2000 = ರೂ. 10,89,40,000/- ಗಳ ಅವಶ್ಯಕತೆಯಿರುತ್ತದೆ. ಅದರ ವಿವರ ಈ ಕೆಳಗಿನಂತಿರುತ್ತದೆ.

**Teaching Block :-**

| Sl. No | Teaching Block | Area (Figures in Sq Feet) |
|---|---|---|
| 1 | Lecture Hall | 4 @ 1080 = 4320 |
| 2 | 1) Nursing Foundation Lab | 1500 |
| | 2) CHN | 900 |
| | 3) Nutrition | 900 |
| | 4) OBG and Pediatrics Lab | 900 |
| | 5) Pre – Clinical Science Lab | 900 |
| | 6) Computer Lab | 1500 |
| 3) | Multipurpose Hall | 3000 |
| 4) | Common Room (Male & Female) | 1100 |
| 5) | Staff Room | 1000 |
| 6) | Principal Room | 300 |
| 7) | Vice Principal Room | 200 |
| 8) | Library | 2400 |
| 9) | A.V. Aids Room | 600 |
| 10) | One room for each head of Department | 800 |

(ಡಾ.ತಿಪ್ಪೇರುದ್ರಯ್ಯ, ಸಿ)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎಸ್.ಶಿವ ಶೈಲಂ) ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

(ಎನ್. ಶಿವಶೈಲಂ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ವೈದ್ಯಕೀಯ ಶಿಕ್ಷಣ ಸಚಿವರು
ಕರ್ನಾಟಕ ಸರ್ಕಾರ

| | | |
|---|---|---|
| 11) | Faculty Room | 2400 |
| 12 | Provisions for Toilets | 1000 |
| | Total | 23720 Sqr.ft |

**<u>Hostel Block (60 Students)</u>**

| Sl. No | Hostel Block | Area (Figures in Sq Feet) |
|---|---|---|
| 1) | Single Room | 24000 |
| | Double Room | |
| 2) | Sanitary One Latrine & One Bath Room (For 5 Students) | 500 |
| 3) | Visitor Room | 500 |
| 4) | Reading Room | 250 |
| 5) | Store | 500 |
| 6) | Recreation Room | 500 |
| 7) | Dining Hall | 3000 |
| 8) | Kitchen & Store | 1500 |
| | | 30750 Sqr.ft |

**<u>Grand Total : 23720 (Teaching Block ) + 30750 (Hostel Block) = 54470 Sqr.ft</u>**

ಕಟ್ಟಡ ಕಾಮಗಾರಿಗೆ ರೂ. 10,89,40,000/–ಗಳು, ಸಿಬ್ಬಂದಿ ವೇತನ ಮತ್ತು ಇತರ ವೆಚ್ಚಕ್ಕಾಗಿ ವಾರ್ಷಿಕ ರೂ. 2,45,15,000/–ಗಳು ಮತ್ತು ಉಪಕರಣ ಮತ್ತು ಪೀಠೋಪಕರಣಗಳ ಖರೀದಿಗೆ ರೂ. 4,00,00,000/–ಗಳು ಹೀಗೆ ಒಟ್ಟು ರೂ. 17,34,55,000/– (ಹದಿನೇಳು ಕೋಟಿ ಮೂವತ್ತನಾಲ್ಕು ಲಕ್ಷದ ಐವತ್ತೈದು ಸಾವಿರ ಮಾತ್ರ) ಗಳ ಅವಶ್ಯಕತೆಯಿರುತ್ತದೆ. <u>ಭಾರತೀಯ ನರ್ಸಿಂಗ್ ಕೌನ್ಸಿಲ್ ನಿಯಮದಂತೆ ಅವಶ್ಯವಿರುವ 42 ಬೋಧಕ ಹಾಗ 40 ಬೋಧಕೇತರ ಸಿಬ್ಬಂದಿ ಹುದ್ದೆಗಳನ್ನು ಸೃಜಿಸಲು ಅನುಮೋದನೆಯನ್ನು ನೀಡಲು ಕೋರಿದೆ. ಹಾಗು ನರ್ಸಿಂಗ್ ಕಾಲೇಜ್ ಕಾಮಗಾರಿ, ಸಿಬ್ಬಂದಿ ವೇತನ, ಉಪಕರಣ, ಪೀಠೋಪಕರಣಗಳ ಖರೀದಿ ಹಾಗು ಇನ್ನಿತರ ವೆಚ್ಚಕ್ಕಾಗಿ ಅವಶ್ಯವಿರುವ ಒಟ್ಟಾರೆ ವೆಚ್ಚ ರೂ. 17,34,55,000/–ಗಳ ಆಯವ್ಯಯಕ್ಕೆ ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.</u>

(ಡಾ.ತಿಪ್ಪೇರುದ್ರಯ್ಯ. ಸಿ)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎನ್.ಶಿವ ಶೈಲಂ) ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು
(ಎನ್. ಶಿವಶೈಲಂ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು
[illegible]
[illegible]
ಕರ್ನಾಟಕ ಸರ್ಕಾರ

ಸಭೆಯ ತೀರ್ಮಾನ :-

ಬಿಎಸ್ಸಿ ನರ್ಸಿಂಗ್ ಕಾಲೇಜ್‌ನ್ನು ಪ್ರಾರಂಬಿಸಲು ಅವಶ್ಯವಿರುವ ಮೂಲಭೂತ ಸೌಕರ್ಯಗಳಾದ ಕಟ್ಟಡ ಕಾಮಗಾರಿ, ಸಿಬ್ಬಂದಿ ವೇತನ ಮತ್ತು ಇತರ ವೆಚ್ಚ ಮತ್ತು ಉಪಕರಣ ಮತ್ತು ಪೀಠೋಪಕರಣಗಳ ಖರೀದಿಗೆ ಅವಶ್ಯವಿರುವ ಒಟ್ಟು ರೂ. 17,34,55,000/- (ಹದಿನೇಳು ಕೋಟಿ ಮೂವತ್ತನಾಲ್ಕು ಲಕ್ಷದ ಐವತ್ತೈದು ಸಾವಿರ ಮಾತ್ರ) ಗಳ ಆಯವ್ಯಕ್ಕೆ ಆಡಳಿತ ಮಂಡಳಿಯು ಅನುಮೋದನೆಯನ್ನು ನೀಡಿತು. ಹಾಗೂ ಬಿಎಸ್ಸಿ ನರ್ಸಿಂಗ್ ಕಾಲೇಜಿಗ್ ಅವಶ್ಯವಿರುವ ವಿವಿಧ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಹುದ್ದೆಗಳನ್ನು ಸೃಜಿಸಲು ಅನುಮತಿ ನೀಡಿ, ಸದರಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿ ಅನುಮೋದನೆ ಪಡೆಯುವಂತೆ ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ಸೂಚಿಸಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ. – 13 | ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಯ ಅವರಣದಲ್ಲಿ ಡಿಡಿಆರ್‌ಸಿ ಕೇಂದ್ರದ ಕಟ್ಟಡವನ್ನು ನಿರ್ಮಿಸಲು ಅವಶ್ಯವಿರುವ ಸ್ಥಳವನ್ನು ಒದಗಿಸಲು ಅನುಮತಿ ನೀಡುವ ಬಗ್ಗೆ. |

ಮಾನ್ಯ ಜಿಲ್ಲಾಧಿಕಾರಿಗಳು, ರಾಯಚೂರು ಇವರ ಅಧ್ಯಕ್ಷತೆಯಲ್ಲಿ ಜರುಗಿದ ಅಂಗವಿಕಲರ ಕುಂದು ಕೊರತೆಗಳನ್ನು ಚರ್ಚಿಸಲು ಕರೆಯಲಾದ ಸಭೆಯಲ್ಲಿ ಜಿಲ್ಲಾ ಅಂಗವಿಕಲ ಪುನರ್ವಸತಿ ಕೇಂದ್ರವನ್ನು ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಜಿಲ್ಲಾ ಶಾಖೆ, ರಾಯಚೂರು ಇವರಲ್ಲಿ ಸ್ಥಳಾವಕಾಶದ ಕೊರತೆಯಿಂದ ದಿನಾಂಕ 02.06.2012ರಂದು ರಿಮ್ಸ್ ಸಂಸ್ಥೆಗೆ ಹಸ್ತಾಂತರಿಸಲಾಗಿರುತ್ತದೆ. ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರವನ್ನು ರಿಮ್ಸ್ ಬೋಧಕ ಆಸ್ಪತ್ರೆಯ ಎಲುಬು ಮತ್ತು ಕೀಲು ವಿಭಾಗದ ಅಧೀನದಲ್ಲಿ ನಡೆಸಲಾಗುತ್ತಿದೆ. ಆದರೆ ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರದ ಅಧಿಕಾರಿಗಳು ರಿಮ್ಸ್ ಹಳೆಯ ಬೋಧಕ ಆಸ್ಪತ್ರೆಯಲ್ಲಿ ಡಿಡಿಆರ್‌ಸಿ ಕೇಂದ್ರಕ್ಕೆ ನೀಡಲಾಗಿರುವ ಸ್ಥಳವು ತುಂಬಾ ಕಿರಿದಾಗಿದೆಯಂದು ತಿಳಿಸಿರುತ್ತಾರೆ.

ದಿನಾಂಕ 28.01.2014ರಂದು ಜರುಗಿದ ಮಾನ್ಯ ಜಿಲ್ಲಾಧಿಕಾರಿಗಳು, ರಾಯಚೂರು ಇವರ ಅಧ್ಯಕ್ಷತೆಯಲ್ಲಿ ಜರುಗಿದ ಜಿಲ್ಲಾ ನಿರ್ವಹಣಾ ಸಮಿತಿ ಸಭೆಯಲ್ಲಿ ಚರ್ಚಿಸಿದಂತೆ, ರಿಮ್ಸ್ ನೂತನ ಬೋಧಕ ಆಸ್ಪತ್ರೆಯ ಅವರಣದಲ್ಲಿ 150 ಚದುರ ಮೀಟರ್ ಸ್ಥಳವನ್ನು ಕಲ್ಪಿಸಿದಲ್ಲಿ ಡಿಡಿಆರ್‌ಸಿ ಕೇಂದ್ರದ ಕಟ್ಟಡಕ್ಕೆ ತಗುಲುವ ವೆಚ್ಚವನ್ನು ಸಂಸದರ ನಿಧಿಯಿಂದ ಬಿಡುಗಡೆ ಮಾಡುವುದಾಗಿ ತಿಳಿಸಿರುತ್ತಾರೆ.

ಕಾರಣ ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರದ ಕಟ್ಟಡವನ್ನು ನೂತನ ಬೋಧಕ ಆಸ್ಪತ್ರೆಯ ಅವರಣದಲ್ಲಿ ನಿರ್ಮಾಣ ಮಾಡಲು ಸ್ಥಳಾವಕಾಶ ಲಭ್ಯವಿದ್ದು, 150 ಚದುರ ಮೀಟರ್ ಸ್ಥಳದಲ್ಲಿ ಡಿಡಿಆರ್‌ಸಿ ಕೇಂದ್ರವನ್ನು ನಿರ್ಮಿಸಲು ಅನುಮತಿ ನೀಡುವ ಬಗ್ಗೆ ಆಡಳಿತ ಮಂಡಳಿಯ ಅನುಮೋದನೆ ಕೋರಿದೆ.

ಸಭೆಯ ತೀರ್ಮಾನ :-

ಸಮಯದ ಅಭಾವವಿರುವ ಕಾರಣ ಸದರಿ ಪ್ರಸ್ತಾವನೆಯನ್ನು ಚರ್ಚಿಸಲಾಗದೇ ಮುಂದಿನ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸುವಂತೆ ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ಸೂಚಿಸಲಾಯಿತು.

(ಡಾ.ತಿಪ್ಪೇರುದ್ರಯ್ಯ, ಸಿ)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎನ್.ಶಿವ ಶೈಲಂ) ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು
(ಎನ್. ಶಿವಶೈಲಂ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು
(ಡಾ. ಶರಣಪ್ರಕಾಶ್ ಪಾಟೀಲ)
ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು,
ಕರ್ನಾಟಕ ಸರ್ಕಾರ

| | |
|---|---|
| ವಿಷಯ ಸೂಚಿ ಸಂಖ್ಯೆ. – 14 | ಸ್ಟೇಟ್ ಬ್ಯಾಂಕ್ ಆಫ್ ಹೈದ್ರಾಬಾದ್ ರಿಮ್ಸ್ ಶಾಖೆ ಇವರಿಂದ ದೇಣಿಗೆ ರೂಪದಲ್ಲಿ ಒಂದು ರೆಫ್ರೀಜರೇಟರ್ ನೀಡಿರುವ ಕುರಿತು. |

ಮ್ಯಾನೇಜರ್, ಸ್ಟೇಟ್ ಬ್ಯಾಂಕ್ ಆಫ್ ಹೈದ್ರಾಬಾದ್, ರಾಯಚೂರು ರಿಮ್ಸ್ ಶಾಖೆ ಇವರು 2013-14ನೇ ಸಾಲಿನಲ್ಲಿ ಬೇಸಿಗೆಯ ನಿಮಿತ್ತ ತಂಪಾಗಿ ನೀರು ಮತ್ತು ಹಾಲನ್ನು ಸಂಗ್ರಹಿಸಿಡಲು ರಿಮ್ಸ್ ಸಂಸ್ಥೆಗೆ ಒಂದು ರೆಫ್ರೀಜರೇಟರನ್ನು ದೇಣಿಗೆ ರೂಪದಲ್ಲಿ ನೀಡಿರುತ್ತಾರೆ. ಕಾರಣ ರೆಫ್ರಿಜರೇಟರನ್ನು ಕೊಡುಗೆ ರೂಪದಲ್ಲಿ ಪಡೆದಿರುವ ಬಗ್ಗೆ ಹಾಗೂ ಜಿಲ್ಲಾ ಪಂಚಾಯತ್, ರಾಯಚೂರು ಇವರುಗಳು ಬ್ಲಡ್ ಕಾಂಪೋನೆಂಟ್ ಉಪಕರಣಗಳನ್ನು ರಿಮ್ಸ್ ಬೋಧಕಾಸ್ಪತ್ರೆಗೆ ನೀಡಿರುವ ಬಗ್ಗೆ ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ಮ್ಯಾನೇಜರ್, ಸ್ಟೇಟ್ ಬ್ಯಾಂಕ್ ಆಫ್ ಹೈದ್ರಾಬಾದ್, ರಾಯಚೂರು ಇವರು ರೆಫ್ರಿಜರೇಟರನ್ನು ಸಂಸ್ಥೆಗೆ ಕೊಡುಗೆ ರೂಪದಲ್ಲಿ ನೀಡಿರುವ ಬಗ್ಗೆ ಹಾಗೂ ಜಿಲ್ಲಾ ಪಂಚಾಯತ್, ರಾಯಚೂರು ಇವರುಗಳು ಬ್ಲಡ್ ಕಾಂಪೋನೆಂಟ್ ಉಪಕರಣಗಳನ್ನು ರಿಮ್ಸ್ ಬೋಧಕ ಆಸ್ಪತ್ರೆಗೆ ನೀಡಿದ್ದು, ಅದನ್ನು ರಿಮ್ಸ್ ಬೋಧಕ ಆಸ್ಪತ್ರೆಯ ರಕ್ತ ನಿಧಿ ಬಂಡಾರದಲ್ಲಿ ಅಳವಡಿಸಿ ಉಪಯೋಗಿಸಲಾಗುತ್ತಿದೆ. ಕಾರಣ ಈ ಎರಡು ಉಪಕರಣಗಳನ್ನು ಸ್ವೀಕರಿಸಿರುವ ಬಗ್ಗೆ ಆಡಳಿತ ಮಂಡಳಿಯು ಅನುಮೋದನೆ ನೀಡಿತು.

| | |
|---|---|
| ವಿಷಯ ಸೂಚಿ ಸಂಖ್ಯೆ. – 15 | ರಿಮ್ಸ್ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ದಿನನಿತ್ಯದ ವೆಚ್ಚಗಳಿಗೆ ಅವಶ್ಯವಿರುವ ಎ.ಸಿ ಬಿಲ್ಲ್ ಮೊತ್ತವನ್ನು ಹೆಚ್ಚಿಸಿಕೊಳ್ಳಲು ಅನುಮತಿ ನೀಡುವ ಬಗ್ಗೆ. |

ರಿಮ್ಸ್ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿರುವ ವಿವಿಧ ವಾಹನಗಳಿಗೆ ಇಂಧನ ಪೂರೈಸಲು ಮತ್ತು ಆಸ್ಪತ್ರೆಯ ಜನರೇಟರ್‌ಗಳಗೆ ಇಂಧನ ಪೂರೈಸಲು, ಆಸ್ಪತ್ರೆಗೆ ದಿನ ನಿತ್ಯ ಚಿಕಿತ್ಸೆಗಾಗಿ ಬಡತನ ರೇಖೆಗಿಂತ ಕೆಳಗಿರುವ ರೋಗಿಗಳು ವಿವಿಧ ಖಾಯಿಲೆಗಳ ನಿಮಿತ್ತ ಆಸ್ಪತ್ರೆಗೆ ಬರುತ್ತಿದ್ದು, ಈ ರೋಗಿಗಳಿಗೆ ಚಿಕಿತ್ಸೆಗಾಗಿ ಆಸ್ಪತ್ರೆಯಲ್ಲಿ ಲಭ್ಯವಿಲ್ಲದ ಅತಿ ಜರೂರಾಗಿ ಬೇಕಾಗುವ ಜೀವ ರಕ್ಷಕ ಔಷಧಿಗಳನ್ನು ಸ್ಥಳಿಯವಾಗಿ ಖರೀದಿಸಿ ಪೂರೈಸಬೇಕಾಗಿರುತ್ತದೆ. ಹಾಗೂ ಸಣ್ಣಪುಟ್ಟ ರಿಪೇರಿ ಮತ್ತು ಕಟ್ಟಡಗಳ ದುರಸ್ಥಿ ಕಾರ್ಯಗಳಿಗೋಸ್ಕರ ಪ್ರತಿ ತಿಂಗಳು ರೂ. 50,000/-ಗಳನ್ನು ಮಂಜೂರು ಮಾಡುತ್ತಿದ್ದು, ಈ ಮೊತ್ತವು ಈ ಮೇಲಿನ ಕಾರ್ಯಗಳಿಗಾಗಿ ಕೊರತೆಯಾಗುತ್ತಿದ್ದು, ಅದುದರಿಂದ ಈ ಮೊತ್ತವನ್ನು ರೂ. 50,000/- ದಿಂದ ರೂ. 1,00,000/-ದವರೆಗೆ ಹೆಚ್ಚಿಸಿದಲ್ಲಿ ಆಸ್ಪತ್ರೆಯಲ್ಲಿ ಉದ್ಭವಿಸುವ ಕುಂದುಕೊರತೆಗಳನ್ನು ನಿವಾರಿಸಲು ಅನುಕೂಲಕರವಾಗುತ್ತದೆ.

ಕಾರಣ ಪ್ರತಿ ತಿಂಗಳಿಗೆ ರೂ. 1,00,000/-ದಂತೆ ಸಂಕ್ಷಿಪ್ತ ಸಾದಿಲ್ವಾರು (ಎ.ಸಿ. ಬಿಲ್ಲು) ಬಿಲ್ಲನ್ನು ಡ್ರಾ ಮಾಡಲು ಮತ್ತು ನಿಯಮಾನುಸಾರ ವೆಚ್ಚ ಮಾಡಲು ನಿರ್ದೇಶಕರು, ರಿಮ್ಸ್, ರಾಯಚೂರು ಹಾಗೂ ವಿಶೇಷಾಧಿಕಾರಿಗಳು, ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ರಾಯಚೂರು ಇವರಿಗೆ ಅನುಮತಿ ನೀಡಲು ಪ್ರಸ್ತಾವನೆಯನ್ನು ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

| | | |
|---|---|---|
| (ಡಾ.ತಿಪ್ಪೇರುದ್ರಯ್ಯ ಸಿ)<br>ನಿರ್ದೇಶಕರು,<br>ರಿಮ್ಸ್, ರಾಯಚೂರು<br>ಹಾಗೂ ಸದಸ್ಯ ಕಾರ್ಯದರ್ಶಿಗಳು,<br>ರಿಮ್ಸ್ ಆಡಳಿತ ಮಂಡಳಿ ಸಭೆ,<br>ರಾಯಚೂರು | (ಎನ್.ಶಿವ ಶೈಲಂ) ಭಾ.ಆ.ಸೇ<br>ಸರ್ಕಾರದ ಕಾರ್ಯದರ್ಶಿಗಳು,<br>ಆಕುಕ, ವೈದ್ಯಕೀಯ ಶಿಕ್ಷಣ,<br>ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ<br>ಮಂಡಳಿ ಸಭೆ, ರಾಯಚೂರು<br>(ಎನ್. ಶಿವಶೈಲಂ)<br>ಸರ್ಕಾರದ ಪ್ರಧಾನ ಕಾರ್ಯದರ್ಶಿ<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | (ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),<br>ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ<br>ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,<br>ರಿಮ್ಸ್, ರಾಯಚೂರು<br>ವೈದ್ಯಕೀಯ ಶಿಕ್ಷಣ ಸಚಿವರು<br>ಕರ್ನಾಟಕ ಸರ್ಕಾರ |

ಸಭೆಯ ತೀರ್ಮಾನ :-

ರಿಮ್ಸ್ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ರಾಜೀವ್ ಗಾಂದಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ವಾಹನಗಳಿಗೆ ಮತ್ತು ಆಸ್ಪತ್ರೆಯ ಜನರೇಟರ್‌ಗಳಿಗೆ ಇಂಧನ ಪೂರೈಸಲು, ಆಸ್ಪತ್ರೆಗೆ ದಿನ ನಿತ್ಯ ಚಿಕಿತ್ಸೆಗಾಗಿ ಬಡತನ ರೇಖೆಗಿಂತ ಕೆಳಗಿರುವ ರೋಗಿಗಳು ವಿವಿಧ ಖಾಯಿಲೆಗಳ ನಿಮಿತ್ತ ಆಸ್ಪತ್ರೆಗೆ ಬರುತ್ತಿದ್ದು, ಈ ರೋಗಿಗಳಿಗೆ ಚಿಕಿತ್ಸೆಗಾಗಿ ಆಸ್ಪತ್ರೆಯಲ್ಲಿ ಲಭ್ಯವಿಲ್ಲದ ಸಂಧರ್ಭದಲ್ಲಿ ಅತಿ ಜರೂರಾಗಿ ಬೇಕಾಗುವ ಜೀವ ರಕ್ಷಕ ಔಷಧಿಗಳನ್ನು ಸ್ಥಳೀಯವಾಗಿ ಖರೀದಿಸಿ ಪೂರೈಸಬೇಕಾಗಿರುತ್ತದೆ. ಹಾಗೂ ಸಣ್ಣಪುಟ್ಟ ರಿಪೇರಿ ಮತ್ತು ಕಟ್ಟಡಗಳ ದುರಸ್ಥಿ ಕಾರ್ಯಗಳಿಗೋಸ್ಕರ ಅವಶ್ಯವಿರುವ ಎ.ಸಿ ಬಿಲ್ಲನ್ನು ರೂ. 50,0000/- ದಿಂದ ಪ್ರತಿ ತಿಂಗಳಿಗೆ ರೂ. 1,00,000/-ದಂತೆ ಸಂಕ್ಷಿಪ್ತ ಸಾದಿಲ್ವಾರು (ಎ.ಸಿ. ಬಿಲ್ಲು) ಬಿಲ್ಲನ್ನು ಡ್ರಾ ಮಾಡಲು ಮತ್ತು ನಿಯಮಾನುಸಾರ ವೆಚ್ಚ ಮಾಡಲು ನಿರ್ದೇಶಕರು, ರಿಮ್ಸ್, ರಾಯಚೂರು ಹಾಗೂ ವಿಶೇಷಾಧಿಕಾರಿಗಳು, ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ರಾಯಚೂರು ಇವರಿಗೆ ಆಡಳಿತಮಂಡಳಿಯು ಅನುಮೋದನೆ ನೀಡಿತು.

| | |
|---|---|
| ವಿಷಯ ಸೂಚಿ ಸಂಖ್ಯೆ - 16 | ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಖಾಲಿ ಇರುವ ಬೋಧಕ ಸಿಬ್ಬಂದಿ ಭರ್ತಿ ಮಾಡಲು ಅನುಮತಿ ನೀಡುವ ಬಗ್ಗೆ |

ಸರ್ಕಾರಿ ಆದೇಶ ಸಂಖ್ಯೆ. ಆಕುಕ / 138 / ಎಂಎಸ್‌ಎಫ್ / 2011 ದಿನಾಂಕ 04.02.2013ರನ್ವಯ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಒಟ್ಟು 59 ಹುದ್ದೆಗಳು ಮಂಜೂರಾಗಿದ್ದು, ಅವುಗಳಲ್ಲಿ ಈವರೆಗೆ 04 ಹುದ್ದೆಗಳನ್ನು ಭರ್ತಿ ಮಾಡಲಾಗಿದ್ದು, ಆಸ್ಪತ್ರೆಗೆ ಅವಶ್ಯವಿರುವ ವಿವಿಧ ಬೋಧಕ ಸಿಬ್ಬಂದಿ ಹುದ್ದೆಗಳನ್ನು ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಪೂರ್ಣ ಪ್ರಮಾಣದಲ್ಲಿ ಪುನಾರಂಭಿಸಲು ಈ ಕೆಳಗೆ ನಮೂದಿಸಿದ ಒಟ್ಟು 47 ಬೋಧಕ ಹುದ್ದೆಗಳನ್ನು ಭರ್ತಿ ಮಾಡುವುದು ಅವಶ್ಯವಾಗಿದ್ದು, ಕಾರಣ ಸದರಿ ಹುದ್ದೆಗಳನ್ನು ನಿಯಮಾನುಸಾರ ಅರ್ಹತೆ ಮತ್ತು ಮೀಸಲಾತಿಯನ್ವಯ ನೇರ ಸಂದರ್ಶನದ ಮೂಲಕ ನೇಮಕಾತಿ ಮಾಡಿಕೊಳ್ಳಲು ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

| ಕ್ರಮ ಸಂಖ್ಯೆ | ವಿಭಾಗ | ಖಾಲಿ ಹುದ್ದೆಗಳ ವಿವರ | | | | | |
|---|---|---|---|---|---|---|---|
| | | ಪ್ರಾಧ್ಯಾಪಕರು | ಸಹ ಪ್ರಾಧ್ಯಾಪಕರು | ಸಹಾಯಕ ಪ್ರಾಧ್ಯಾಪಕರು | ಹಿರಿಯ ಸ್ಥಾನಿಕರು | ಟ್ಯೂಟರ್ಸ್ | ಪರ್‌ಫ್ಯೂಷನಿಸ್ಟ್ |
| 1 | ನ್ಯೂರಾಲಜಿ | 1 | 1 | 2 | - | - | - |
| 2 | ನ್ಯೂರೋ ಸರ್ಜರಿ | 1 | 0 | 2 | - | - | - |
| 3 | ಕಾರ್ಡಿಯಾಲಜಿ | 1 | 0 | 1 | - | - | - |
| 4 | ಯೋರೋಲಜಿ | 1 | 1 | 0 | - | - | - |
| 5 | ನೆಫ್ರೋರೋಲಜಿ (ಡಿಎಂ) | 1 | 1 | 2 | - | - | - |
| 6 | ಪಿಡಿಯಾರ್ಟಿಕ್ ಸರ್ಜರಿ (ಎಂಸಿಹೆಚ್) | 1 | 1 | 2 | - | - | - |
| 7 | ಅನಸ್ತೇಸಿಯಾ | 1 | 1 | 4 | - | - | - |
| 8 | ಪ್ಲಾಸ್ಟಿಕ್ ಸರ್ಜರಿ | 1 | 0 | 0 | - | - | - |

(ಡಾ.ಶಿವ್ಪೇರುದ್ರಯ್ಯ, ಸಿ)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎನ್.ಶಿವ ಶೈಲಂ) ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು
(ಎನ್. ಶಿವಶೈಲಂ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು
ಡಾ. ಶರಣಪ್ರಕಾಶ್...
ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು
ಕರ್ನಾಟಕ ಸರ್ಕಾರ

| | | | | | | | |
|---|---|---|---|---|---|---|---|
| 9 | ಕಾರ್ಡಿಯೋ ಥೊರಾಸಿಕ್ ಸರ್ಜರಿ | 1 | 1 | 2 | – | – | – |
| 10 | ಫಾಸಿಯೋ ಮ್ಯಾಕ್ಷೀಲರಿ | 1 | 0 | 0 | – | – | – |
| 11 | ವೈದ್ಯಶಾಸ್ತ್ರ ವಿಭಾಗ | – | – | – | 06 | – | – |
| 12 | ಶಸ್ತ್ರ ಚಿಕಿತ್ಸಾ ವಿಭಾಗ | – | – | – | 06 | – | – |
| 13 | ಟ್ಯೂಟರ್ಸ್ | – | – | – | – | 03 | – |
| 14 | ಫರ್‌ಫ್ಯೂಷನಿಸ್ಟ್ | – | – | – | – | – | 01 |
| | ಒಟ್ಟು | 10 | 06 | 15 | 12 | 03 | 01 |

ಸಭೆಯ ತೀರ್ಮಾನ :–

ಸರ್ಕಾರಿ ಆದೇಶ ಸಂಖ್ಯೆ. ಆಕುಕ / 138 / ಎಂಎಸ್ಎಫ್ / 2011 ದಿನಾಂಕ 04.02.2013ರನ್ವಯ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಮಂಜೂರು ಆಗಿ ಖಾಲಿ ಉಳಿದಿರುವ ವಿವಿಧ ಬೋಧಕ ಸಿಬ್ಬಂದಿ ಹುದ್ದೆಗಳನ್ನು ನಿಯಮಾನುಸಾರ ಭರ್ತಿ ಮಾಡಿಕೊಳ್ಳಲು ವಿಶೇಷಾಧಿಕಾರಿಗಳು, ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ರಾಯಚೂರು ಇವರಿಗೆ ಅನುಮತಿನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ. – 17 | ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಅವರಣದಲ್ಲಿ 11 ಕೆವಿ ಕ್ಯೂಬಿಕಲ್ ಮೀಟರ್‌ನ್ನು ಅಳವಡಿಸಿ ಸ್ಥಳಾಂತರಿಸಲಾದ ಕಾರ್ಯಕ್ಕಾಗಿ ಮೆ॥ ಮಾತಾ ಎಲೆಕ್ಟ್ರೀಕಲ್ಸ್, ರಾಯಚೂರು ಇವರಿಗೆ ರೂ. 3,80,202/–ಗಳ ಬಿಲ್ಲನ್ನು ಪಾವತಿಸಿರುವ ಕುರಿತು ಘಟನೋತ್ತರ ಅನುಮತಿ ನೀಡುವ ಬಗ್ಗೆ. |

ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಅವರಣದಲ್ಲಿ ಮುಖ್ಯ ವಿದ್ಯುತ್ ಘಟಕದ 11 ಕೆವಿಎ ಕ್ಯೂಬಿಕಲ್ ಮೀಟರ್‌ನ್ನು 33 ಕೆವಿಎ ಹತ್ತಿರ ಇರುವುದರಿಂದ ಪದೇ ಪದೇ ಇಂಡಕ್ಷನ್ ತೊಂದರೆಯಿಂದ ಆಸ್ಪತ್ರೆಯ ವಿದ್ಯುತ್ ಸರಬರಾಜಿನಲ್ಲಿ ವಿಪರೀತ ತೊಂದರೆ ಉಂಟಾಗುತ್ತಿದ್ದರಿಂದ ಸದರಿ ಕ್ಯೂಬಿಕಲ್ ಮೀಡರನ್ನು ಎಲ್‌ಟಿ ಕೊಠಡಿಯ ಹಿಂದುಗಡೆ ಸ್ಥಳಾಂತರಿಸುವುದು ಅವಶ್ಯವಾಗಿದ್ದು, ಸಹಾಯಕ ಅಭಿಯಂತರರು, ಜೆಸ್ಕಾಂ ಇವರು ದಿನಾಂಕ 19.01.2013ರ ಪತ್ರದಲ್ಲಿ ಮತ್ತು 22.07.2013ರ ಪತ್ರದಲ್ಲಿ ಸೂಚಿಸಿರುತ್ತಾರೆ. ಸದರಿ ಕ್ಯೂಬಿಕಲ್ ಮೀಟ್‌ರನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಿ ಅಳವಡಿಸುವುದು ಅವಶ್ಯವಾಗಿರುತ್ತದೆ. ಹಾಗೂ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಪುನಾಂರಭಿಸಲು ಸದರಿ ಕ್ಯೂಬಿಕಲ್ ಮೀಟರ್ ಅಳವಡಿಸಿ ವಿದ್ಯುತ್ ಸಂಪರ್ಕವನ್ನು ಆಸ್ಪತ್ರೆಗೆ ನೀಡುವುದು ಜರೂರಾಗಿದ್ದು, ಕಾರಣ ಆಸ್ಪತ್ರೆಯನ್ನು ಪುನಾಂರಭಿಸಲು ರೋಗಿಗಳ ಹಿತದೃಷ್ಟಿಯಿಂದ ಹಾಗೂ ಸಮಯದ ಅಭಾವದಿಂದ ಸ್ಥಳೀಯ ಅಧಿಕೃತ ಗುತ್ತಿಗೆದಾರರಾದ ಮೆ॥ ಮಾತಾ ಎಲೆಕ್ಟ್ರೀಕಲ್ಸ್, ರಾಯಚೂರು ಇವರಿಂದ ಕ್ಯೂಬಿಕಲ್ ಮೀಟರ್ ಸ್ಥಳಾಂತರಿಸಿ ಆಸ್ಪತ್ರೆಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲಾಗಿರುತ್ತದೆ. ಸದರಿ ಕಾರ್ಯಕ್ಕಾಗಿ ರೂ. 3,80,000/–ಗಳನ್ನು ಮೆ॥ ಮಾತಾ ಎಲೆಕ್ಟ್ರೀಕಲ್ಸ್, ರಾಯಚೂರು ಇವರಿಗೆ ಬಿಲ್ಲಿನ ಮೊತ್ತವನ್ನು ಸಂದಾಯ ಮಾಡಲಾಗಿರುತ್ತದೆ.

ಕಾರಣ ರೋಗಿಗಳ ಹಿತದೃಷ್ಟಿಯಿಂದ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಪುನಾಂರಭಿಸಲು ನೇರವಾಗಿ ಮೆ॥ ಮಾತಾ ಎಲೆಕ್ಟ್ರೀಕಲ್ಸ್, ರಾಯಚೂರು ಇವರಿಂದ ನಿರ್ವಹಿಸಲಾದ ಕಾರ್ಯಕ್ಕೆ ಹಾಗೂ ಸಂದಾಯ ಮಾಡಲಾದ ರೂ. 3,80,000/– ಗಳ ವೆಚ್ಚದ ಕುರಿತು ಆಡಳಿತ ಮಂಡಳಿಯ ಘಟನೋತ್ತರ ಅನುಮೋದನೆ ಕೋರಿ ಸಲ್ಲಿಸಿದೆ.

(ಡಾ.ತಿಪ್ಪೇರುದ್ರಯ್ಯ. ಸಿ)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎನ್.ಶಿವ ಶೈಲಂ) ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು
(ಎನ್. ಶಿವಶೈಲಂ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

ಸಭೆಯ ತೀರ್ಮಾನ :–

ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಅವರಣದಲ್ಲಿ 11 ಕೆವಿ ಕ್ಯೂಬಿಕಲ್ ಮೀಟರ್‌ನ್ನು ಅಳವಡಿಸಿ ಸ್ಥಳಾಂತರಿಸಲಾದ ಕಾರ್ಯಕ್ಕಾಗಿ ಮೆ॥ ಮಾತಾ ಎಲೆಕ್ಟ್ರೀಕಲ್ಸ್, ರಾಯಚೂರು ಇವರಿಗೆ ರೂ. 3,80,202/–ಗಳ ಬಿಲ್ಲನ್ನು ಪಾವತಿಸಿರುವ ಕುರಿತು ಆಡಳಿತ ಮಂಡಳಿಯು ಘಟನೋತ್ತರ ಅನುಮತಿ ನೀಡಿತು.

| | |
|---|---|
| ವಿಷಯ ಸೂಚಿ ಸಂಖ್ಯೆ. – 18 | ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಅವರಣದಲ್ಲಿ ಚಹಾ ಮತ್ತು ಕಾಫಿ ಡೆಬ್ಬಿ ಅಂಗಡಿಯನ್ನು ಇಟ್ಟು ಕೊಳ್ಳಲು ಅಂಗವಿಕಲ ಅಭ್ಯರ್ಥಿಗೆ ಅನುಮತಿ ನೀಡುವ ಕುರಿತು. |

ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯು ಅಸ್ತಿತ್ವಕ್ಕೆ ಬಂದಾಗಿನಿಂದಲೂ ಶ್ರೀ ಅಬ್ದುಲ್ ರಹೀಮ್ ತಂದೆ ಮೊಹಮ್ಮದ್ ಇಬ್ಬಾಲ್ ಇವರು ಆಸ್ಪತ್ರೆಯ ಒಳ ಭಾಗದಲ್ಲಿ ರೋಗಿಗಳಿಗೆ ಹಾಗೂ ಸಿಬ್ಬಂದಿಗಳಿಗೆ ತ್ವರಿತವಾಗಿ ಚಹಾ ಮತ್ತು ಕಾಫಿಯನ್ನು ಪೂರೈಸುತ್ತಾ ಜೀವನವನ್ನು ಸಾಗಿಸುತ್ತಿದ್ದರು.. ಆದರೆ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯು ಸದ್ಯ ರಿಮ್ಸ್ ಅಧೀನಕ್ಕೆ ಬಂದಿರುವುದರಿಂದ ಪುನಃ ಆಸ್ಪತ್ರೆಯ ಒಳ ಭಾಗದಲ್ಲಿ ಚಹಾ ಮತ್ತು ಕಾಫಿಯನ್ನು ಪೂರೈಸುವ ಯಂತ್ರವನ್ನು ಇಟ್ಟು ಕೊಳ್ಳಲು ಅನುಮತಿ ನೀಡುವಂತೆ ವಿಶೇಷಾಧಿಕಾರಿಗಳು, ಓಪೆಕ್ ಆಸ್ಪತ್ರೆ ಇವರ ಮುಖಾಂತರ ಮನವಿಯನ್ನು ಸಲ್ಲಿಸಿರುತ್ತಾರೆ.

ಕಾರಣ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಅವರಣದಲ್ಲಿ ಶ್ರೀ ಅಬ್ದುಲ್ ರಹೀಮ್ ತಂದೆ ಮೊಹಮ್ಮದ್ ಇಬ್ಬಾಲ್ ಇವರಿಗೆ ಚಹಾ ಮತ್ತು ಕಾಫಿಯನ್ನು ಪೂರೈಸುವ ಯಂತ್ರವನ್ನು ಇಟ್ಟು ಕೊಳ್ಳಲು ಅನುಮತಿ ನೀಡುವ ಬಗ್ಗೆ ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :–

ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಆವರಣದಲ್ಲಿ ಚಹಾ ಮತ್ತು ಕಾಫಿ ಅಂಗಡಿಯನ್ನು ಪ್ರಾರಂಭಿಸಲು ನಿಯಮಾನುಸಾರ ಟೆಂಡರ್ ಕರೆದು ಕ್ರಮ ಕೈಗೊಳ್ಳುವಂತೆ ವಿಶೇಷಾಧಿಕಾರಿಗಳು, ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ರಾಯಚೂರು ಇವರಿಗೆ ಆಡಳಿತ ಮಂಡಳಿಯು ನಿರ್ದೇಶನ ನೀಡಿತು.

| | |
|---|---|
| ವಿಷಯ ಸೂಚಿ ಸಂಖ್ಯೆ. – 19 | ಅಧ್ಯಕ್ಷರ ಅಪ್ಪಣೆ ಮೇರೆಗೆ ಇನ್ನಿತರ ವಿಷಯಗಳು |

ಆಡಳಿತ ಮಂಡಳಿಯು ವಿಷಯ ಸೂಚನೆಗಳೊಂದಿಗೆ ವಿಷಯಗಳನ್ನು ಮಂಡಿಸಲು ಹೇಳಿದ್ದರಿಂದ ಯಾವುದೇ ವಿಷಯಗಳನ್ನು ಚರ್ಚಿಸದೇ ಮುಂದಿನ ಆಡಳಿತ ಮಂಡಳಿಯಲ್ಲಿ ಪ್ರತ್ಯೇಕ ವಿಷಯಗಳೊಂದಿಗೆ ಮಂಡಳಿಸುವಂತೆ ಸಭೆಯಲ್ಲಿ ಹಾಜರಿದ್ದ ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ಸೂಚಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಡಾ.ತಿಪ್ಪೇರುದ್ರಯ್ಯ. ಸಿ)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎನ್.ಶಿವ ಶೈಲಂ) ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು
(ಎನ್. ಶಿವಶೈಲಂ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು
ಡಾ. ಶರಣಪ್ರಕಾಶ ಆರ್. ಪಾಟೀಲ
ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು
ಕರ್ನಾಟಕ ಸರ್ಕಾರ